Rotary
ರೋಟರಿ ಐಸಿರಿ ಪರ್ಕಳ
ವಲಯ-4, ರೋ. ಜಿಲ್ಲೆ-3182
ನಮ್ಮ ನಡೆ... ಕೃಷಿಯ ಕಡೆ...
UNITE FOR GOOD


Rtn. Francesco Arezzo
R.I. President


Rtn. K. Palaksha
District Governor

# ಐಶ್ವರ್ಯ

ಸಂಪುಟ: 4 ಸಾಪ್ತಾಹಿಕ ಸಂಚಿಕೆ : 9

ದಿನಾಂಕ: 02.09.2025


Rtn. Anil Kumar
President


Rtn. Krishnappa
Secretary

## ರೋಟರಿ ಐಸಿರಿ ಮಡಿಲಿಗೆ ಹನ್ನೆರಡು ಜಿಲ್ಲಾ ಪ್ರಶಸ್ತಿಗಳು




ರೋಟರಿ ಐಸಿರಿಯ ಮೂರನೇ ವರ್ಷದ ಅಧ್ಯಕ್ಷ ರೊ. ಸುನೀಲ್ ಕುಮಾರ್ ನೇತೃತ್ವದ 2024–25ನೇ ಸಾಲಿನಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳಿಗೆ ಹನ್ನೆರಡು ಪ್ರಶಸ್ತಿಗಳು ದೊರೆತಿರುವುದು ನಮಗೆಲ್ಲಾ ಹೆಮ್ಮೆಯ ವಿಚಾರ. ಆಗಸ್ಟ್ 30ರಂದು ನಿಕಟಪೂರ್ವ ಜಿಲ್ಲಾ ಗವರ್ನರ್ ರೊ. ಸಿ.ಎ. ದೇವಾನಂದ್ ಅವರಿಂದ ಪ್ರಶಸ್ತಿ ಪ್ರಮಾಣಪತ್ರ ಪಡೆಯುತ್ತಿರುವ ನಮ್ಮ ನಿಕಟಪೂರ್ವ ಅಧ್ಯಕ್ಷರು ಮತ್ತು ತಂಡ.

2024–25 ನೇ ಸಾಲಿನ ಅಧ್ಯಕ್ಷ ರೊ. ಸುನೀಲ್ ಕುಮಾರ್ ಮತ್ತು ಕಾರ್ಯದರ್ಶಿ ರೊ. ಪಾಂಡುರಂಗ ಲಾಗ್ವಂಕರ್ ನೇತೃತ್ವದ ರೋಟರಿ ಐಸಿರಿ ತಂಡ ವರ್ಷವಿಡೀ ಆಯೋಜಿಸಿದ ಹತ್ತು ಹಲವಾರು ಕಾರ್ಯಕ್ರಮಗಳಿಗೆ ಮನ್ನಣೆಯಾಗಿ ಹನ್ನೆರಡು ಜಿಲ್ಲಾ ಪ್ರಶಸ್ತಿಗಳು ದೊರೆತಿವೆ. ಆಗಸ್ಟ್ 30ರಂದು ಸಾಸ್ತಾನದ ಕೋಸ್ಟಲ್ ಪ್ಯಾರಡೈಸ್ ನಲ್ಲಿ ನಡೆದ ರೋಟರಿ ಜಿಲ್ಲೆ 3182 ಅವಾರ್ಡ್ಸ್ ನೈಟ್ "ಕಲ್ಯಾಣ ಸಂಗಮ"ದಲ್ಲಿ 2024–25ನೇ ಸಾಲಿನ ಜಿಲ್ಲಾ ಗವರ್ನರ್ ರೊ. ಸಿ.ಎ. ದೇವಾನಂದ್ ರವರಿಂದ ರೊ. ಸುನೀಲ್ ಕುಮಾರ್ ರವರು ಈ ಪ್ರಶಸ್ತಿ ಪ್ರಮಾಣ ಪತ್ರವನ್ನು ಸ್ವೀಕರಿಸಿದರು.

ಜಿಲ್ಲಾ ಗವರ್ನರ್ ರೊ. ಕೆ. ಪಾಲಾಕ್ಷ, PDG ಬಿ. ಸಿ. ಗೀತಾ, 2024–25ನೇ ಸಾಲಿನ ಅಸಿಸ್ಟೆಂಟ್ ಗವರ್ನರ್ ರೊ. ಜಗನ್ನಾಥ ಕೋಟೆ, Past AG MPHF ಎಮ್. ಮಂಜುನಾಥ ಉಪಾಧ್ಯ, Past AG MPHF Dr. ಎ. ಗಣೇಶ, ವಲಯ ಸೇನಾನಿ ರೊ. ಸ್ಮಿತಾ ಕಾಮತ್, ಜಿಲ್ಲಾ RCC ಉಪಸಭಾಪತಿ ರೊ. ಗುರುಪ್ರಸಾದ್ ಕಾಮತ್, Conference Promotion ವಲಯಾಧಿಕಾರಿ ರೊ. ಗೀತಾಶ್ರೀ ಎಂ. ಉಪಾಧ್ಯ, ರೊ. ಪಾಂಡುರಂಗ ಲಾಗ್ವಂಕರ್, ರೋಟರಿ ಐಸಿರಿಯ "ಐಶ್ವರ್ಯ" ಸಂಪಾದಕ ರೊ. ರಾಜೇಶ್ ಡಿ. ಶೆಣೈ, ಹಿರಿಯ ರೊಟೇರಿಯನ್ನರಾದ ರೊ. ರಾಮಕೃಷ್ಣ ಪೂಂಜಾ, ರೊ. ಸುಶೀಲಾ ಪೂಂಜಾ, ಮಾಸ್ಟರ್ ಆಕರ್ಷ್ ಉಪಸ್ಥಿತರಿದ್ದರು.

ರೋಟರಿ ಐಸಿರಿ ಅಧ್ಯಕ್ಷ ರೊ. ಅನಿಲ್ ಕುಮಾರ್ ರವರು ತಂಡವನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದರು.

ರೋಟರಿ ಕ್ಲಬ್ ಕಲ್ಯಾಣಪುರ ಆತಿಥ್ಯ ವಹಿಸಿದ ಈ ಅವಾರ್ಡ್ಸ್ ನೈಟ್ ಕಾರ್ಯಕ್ರಮವನ್ನು Past R.I. Director PDG ರಾಜು ಸುಬ್ರಮಣ್ಯನ್ ಅವರು ಉದ್ಘಾಟಿಸಿದರು. DG ರೊ. ಕೆ. ಪಾಲಾಕ್ಷ ಅಧ್ಯಕ್ಷತೆ ವಹಿಸಿದ್ದು, PDG ದೀಪಕ್ ಪುರೋಹಿತ್, PDG ಅಭಿನಂದನ್ ಎ. ಶೆಟ್ಟಿ, PDG. ಡಾ. ಎಸ್ ನಾಗೇಂದ್ರ, PDG ಬಿ. ರಾಜಾರಾಮ್ ಭಟ್, PDG. ಬಿ. ಎನ್. ರಮೇಶ್, ನಿಯೋಜಿತ ಜಿಲ್ಲಾ ಗವರ್ನರ್ ರೊ. ಬಿ. ಎಂ. ಭಟ್, ನಾಮಾಂಕಿತ ಜಿಲ್ಲಾ ಗವರ್ನರ್ ರೊ. ವಸಂತ್ ಹೋಬಳಿದಾರ್, ವಲಯ 3 ಅಸಿಸ್ಟೆಂಟ್ ಗವರ್ನರ್ ರೊ. ಆನಂದ್ ಶೆಟ್ಟಿಯವರು ಮುಖ್ಯ ಅತಿಥಿಗಳಾಗಿದ್ದರು.

## ಪ್ರೇರಣಾ ಸಿರಿ: FIGHTING DISEASE

Rotary has established a robust healthcare network as a global organization that unites doctors, patients, volunteers, and governments.

This network is dedicated to enhancing healthcare accessibility for all age groups. The Rotary Foundation India (RFI) is a key player in this endeavour, tackling both communicable and non-communicable diseases through various grassroots initiatives.

These initiatives, from raising awareness about prevalent diseases in underserved communities to establishing clinics and organizing blood donation camps, have significantly improved India's healthcare landscape.

The foundation has been a driving force in meeting India's diverse health needs by providing hospitals with medical equipment and training facilities.

Rotary's support extends to activities that mitigate the causes and effects of diseases.

These projects are designed to fortify the healthcare system by enhancing access to medical services, expanding their reach, providing medical equipment, and training healthcare personnel.

This collaborative approach is a testament to Rotary's commitment to improving healthcare globally.

**Key Interventions**

Improving the capacity of local healthcare professionals.

Promoting disease prevention and treatment programmes.

Strengthening healthcare system.

Providing clinical treatment and rehabilitation.


Funding Graduate Scholarships for career-minded professionals.







ರೊ. ಸುನೀಲ್ ಕುಮಾರ್ ಸ್ವೀಕರಿಸಿದ ಪ್ರಶಸ್ತಿ ಪ್ರಮಾಣ ಪತ್ರ


District Awards 2024-25

Rotary International District 3182

District AWARDS 2024-25

Rtn Devanand, District Governor 2024-25 · Rtn JAGANATHA KOTE, Assistant Governor · Rtn SUNIL KUMAR, President

CLUB : AISIRI PARKALA ZONE : 04 CLUB CATEGORY : SMALL

A9 - MANAGEMENT OF CLUB FINANCES
B1 - FOUR WAY TEST
C1 - ROTARY COMMUNITY CORPS
C3A - COMMUNITY ECONOMIC DEVLOPMENT

A10 - FAMILY OF ROTARY
B2 - VOCATIONAL AWARENESS
B3 - VOCATIONAL AWARDS
C3D - MATERNAL & CHILD HEALTH
E1 - RYLA
F1 - AROGYA & SWACHATHA JAGRUTHI
F3 - HASIRU & NEERU JAGRUTHI
F4 - RASTHE SANCHARA JAGRUTHI

Rtn Stephanie A. Urchick, RI President 2024-25 · Rtn Devanand, District Governor 2024-25 · Rtn B. C. Geetha, District Chairman, Dist Awards · Rtn Jaikishan, Vice Chairman, Dist Awards

## ಜ್ಞಾನ ಸಿರಿ

**DISTRICT INTERACT ASSEMBLY**

**Host : Rotary Aisiri Parkala (Zone IV)**

**Date : 07th September 2025, Sunday** **Time : 8.30am onwards**

**Venue : Nutana Ravindra Mantapa, MGM College, Udupi**

ರೋಟರಿ ಐಸಿರಿಯ ಆತಿಥ್ಯದಲ್ಲಿ ನಡೆಯಲಿರುವ

ರೋಟರಿ ಜಿಲ್ಲಾ ಕಾರ್ಯಕ್ರಮ

## ಬೌದ್ಧಿಕ ಸಿರಿ

ಉಪನ್ಯಾಸದ ಸಮಯದಲ್ಲಿ, ಆ ಪ್ರಾಧ್ಯಾಪಕರು ಇದ್ದಕ್ಕಿದ್ದಂತೆ ಒಂದು ಲೋಟ ನೀರನ್ನು ಎತ್ತಿಕೊಂಡು ಹಿಡಿದರು. ವಿದ್ಯಾರ್ಥಿಗಳು ಒಬ್ಬರನ್ನೊಬ್ಬರು ನೋಡುತ್ತಾ ವಿವರಣೆಗಾಗಿ ಕಾಯುತ್ತಿದ್ದರು. ಹತ್ತು ನಿಮಿಷಗಳು ಕಳೆದವು, ಆದರೆ ಅವರು ಇನ್ನೂ ತಮ್ಮ ತೋಳನ್ನು ಕೆಳಗಿಳಿಸಲಿಲ್ಲ. ಕೊನೆಗೆ, ಅವರು ಕೇಳಿದರು: "ಹೇಳಿ, ಈ ಗ್ಲಾಸ್ ಎಷ್ಟು ತೂಕವಿರಬಹುದು?". ಕಾಲು ಕೇಜಿ, ಮುನ್ನೂರು ಗ್ರಾಂ…. ನಾಲ್ನೂರು ಗ್ರಾಂ… ಅರ್ಧ ಕೇಜಿ… ಹೀಗೆ ವಿವಿಧ ಉತ್ತರಗಳು ಬಂದವು.

ಪ್ರಾಧ್ಯಾಪಕರು ಮುಗುಳ್ನಕ್ಕು, ನನಗೂ ಗೊತ್ತಿಲ್ಲ. ನಾವು ಅದನ್ನು ತೂಕ ಮಾಡಬೇಕಾಗಿತ್ತು…. ಆದರೆ ಅದು ನಿಜವಾದ ಪ್ರಶ್ನೆಯಲ್ಲ. ನಾನು ಈ ಗ್ಲಾಸ್ ಅನ್ನು ಕೆಲವು ನಿಮಿಷಗಳ ಕಾಲ ಹಿಡಿದರೆ ಏನಾಗುತ್ತದೆ?"

"ಏನೂ ಇಲ್ಲ," ವಿದ್ಯಾರ್ಥಿಗಳು ಉತ್ತರಿಸಿದರು. "ಸರಿ. ಈಗ, ನಾನು ಅದನ್ನು ಒಂದು ಗಂಟೆ ಹಿಡಿದರೆ ಏನು?" "ನಿಮ್ಮ ತೋಳು ನೋಯಲು ಪ್ರಾರಂಭಿಸುತ್ತದೆ" ಎಂದು ಒಬ್ಬರು ಉತ್ತರಿಸಿದರು. "ಸರಿ. ಮತ್ತು ನಾನು ಅದನ್ನು ದಿನವಿಡೀ ಹಿಡಿದಿಡಲು ಪ್ರಯತ್ನಿಸಿದರೆ? "ನಿಮ್ಮ ತೋಳು ಮರಗಟ್ಟುತ್ತದೆ, ನಿಮಗೆ ತೀವ್ರ ನೋವು ಇರುತ್ತದೆ, ಬಹುಶಃ ವೈದ್ಯಕೀಯ ಸಹಾಯವೂ ಬೇಕಾಗಬಹುದು," ಎಂದೆಲ್ಲ ಉತ್ತರ ಬಂತು.

ಗಾಜಿನ ತೂಕ ಬದಲಾಗಿದೆಯೇ? ಎಂದು ಪ್ರಾಧ್ಯಾಪಕರು ಕೇಳಿದಾಗ "ಇಲ್ಲ," ಎಂದರು. "ಹಾಗಾದರೆ ತೋಳಿನಲ್ಲಿ ನೋವು ಏಕೆ? ಸ್ನಾಯುಗಳಲ್ಲಿ ಒತ್ತಡ ಏಕೆ?" ಮೌನದ ನಡುವೆ ಕೇಳಿದರು: "ನೋವು ತೊಡೆದುಹಾಕಲು ನಾನು ಏನು ಮಾಡಬೇಕು?" "ಗಾಜನ್ನು ಕೆಳಗೆ ಇರಿಸಿ," ಯಾರೋ ಹೇಳಿದರು. "ಯೆಸ್" ಎಂದು ಪ್ರಾಧ್ಯಾಪಕರು ಉದ್ಗರಿಸಿದರು!

"ಜೀವನದ ಸಮಸ್ಯೆಗಳು ಅದೇ ರೀತಿ ಕೆಲಸ ಮಾಡುತ್ತವೆ. ನೀವು ಅವುಗಳನ್ನು ಕೆಲವು ನಿಮಿಷಗಳ ಕಾಲ ತಲೆಯಲ್ಲಿ ಹೊತ್ತುಕೊಂಡರೆ, ಅದು ದೊಡ್ಡ ವಿಷಯವಲ್ಲ. ಅವುಗಳ ಬಗ್ಗೆ ಹೆಚ್ಚು ಹೊತ್ತು ಯೋಚಿಸಿ, ಅವು ನೋಯಿಸಲು ಪ್ರಾರಂಭಿಸುತ್ತವೆ. ದಿನವಿಡೀ ಅವುಗಳ ಮೇಲೆಯೇ ಇರಿ, ಅವು ನಿಮ್ಮನ್ನು ಪಾರ್ಶ್ವವಾಯುವಿಗೆ ತಳ್ಳುತ್ತವೆ – ನೀವು ಬೇರೆ ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ."

"ಅದಕ್ಕಾಗಿಯೇ ಪ್ರತಿ ದಿನದ ಕೊನೆಯಲ್ಲಿ ನಿಮ್ಮ ಸಮಸ್ಯೆಗಳನ್ನು ಕೆಳಗೆ ಇಡುವುದು ಬಹಳ ಮುಖ್ಯ. ಅವುಗಳ ಭಾರವನ್ನು ಹೊತ್ತುಕೊಂಡು ಮಲಗಬೇಡಿ. ವಿಶ್ರಾಂತಿಯ ಜೊತೆಗೆ ಪುನರ್‌ಶಕ್ತಿ ಮತ್ತು ಸ್ಪಷ್ಟತೆಯೊಂದಿಗೆ ನಾಳೆಯನ್ನು ಎದುರಿಸಲು ಸಿದ್ಧರಾಗಿ ಎಚ್ಚರಗೊಳ್ಳುತ್ತೀರಿ."

## ಆಗಸ್ಟ್ 25ರ ಸಭೆಯ ಝಲಕ್ .....!

















## ಕಾರ್ಯದರ್ಶಿಯವರ ವರದಿ

ರೋಟರಿ ಐಸಿರಿಯ 8ನೇ ವಾರದ ಸಭೆಯು 25/08/2025 ರಂದು RCC ಕಾರ್ಯಾಲಯದಲ್ಲಿ ನಡೆಯಿತು. ರೊ. ಎಂ. ಮಂಜುನಾಥ್ ಉಪಾಧ್ಯರವರು ಕೊರಳ ಲಾಂಛನ ತೊಡಿಸಿದರು. ಅಧ್ಯಕ್ಷರು ಸಭೆಯನ್ನು ಆರಂಭಿಸಿದರು. ರೊ. ಗೀತಾಶ್ರೀ ಎಂ. ಉಪಾಧ್ಯ ಪ್ರಾರ್ಥನೆ ನಡೆಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್ ಎಲ್ಲರನ್ನೂ ಸ್ವಾಗತಿಸಿದರು. ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಕಳೆದ ವಾರದ ವರದಿಯನ್ನು ಮಂಡಿಸಿದರು.

ಅಧ್ಯಕ್ಷರು ಮುಂಬರುವ District Interact Assembly ಯ ಬಗ್ಗೆ ಪೂರ್ವತಯಾರಿ ನಡೆಸಲು ಸದಸ್ಯರಿಗೆ ಜವಾಬ್ದಾರಿಗಳನ್ನು ಹಂಚಿದರು.

ವಾರದ ಬುಲೆಟಿನ್ ಐಶ್ವರ್ಯವನ್ನು ರೊ. ಗೀತಾಶ್ರೀ ಎಂ. ಉಪಾಧ್ಯ ಬಿಡುಗಡೆಗೊಳಿಸಿದರು. ಸಂಪಾದಕರಾದ ರೊ. ರಾಜೇಶ್ ಡಿ. ಶೆಣೈ ಸಹಕರಿಸಿದರು.

ನಿಕಟಪೂರ್ವ ಅಧ್ಯಕ್ಷರಾದ ರೊ. ಸುನಿಲ್ ಕುಮಾರ್ ಮಾತನಾಡಿ ಆಗಸ್ಟ್ 30 ಮತ್ತು 31ರಂದು ನಡೆಯಲಿರುವ District Awards Night ಮತ್ತು District Seminar on Membership Development and Public Image ಕಾರ್ಯಕ್ರಮಕ್ಕೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ವಿನಂತಿಸಿದರು.

ರೊ. ಮಂಜುನಾಥ್ ಉಪಾಧ್ಯ ಜಿಲ್ಲಾ District Interact Assembly ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು.

ನಿಯೋಜಿತ ಅಧ್ಯಕ್ಷರಾದ ರೊ. ಸಂದೀಪ್ ಕುಮಾರ್ ಮಾತನಾಡಿ Zonal Membership Development and Public Image Seminar ನಲ್ಲಿ ಅತಿಥಿಗಳು ರೋಟರಿ ಐಸಿರಿಯ Public Image ಗುರುತಿಸಿದ್ದನ್ನು ನೆನಪಿಸಿಕೊಂಡರು. ಅಲ್ಲದೆ District Interact Assembly ಯ ಪೂರ್ವತಯಾರಿ ಬಗ್ಗೆ ಮಾಹಿತಿ ನೀಡಿದರು.

ರೊ. ಕೆ. ಪ್ರಭಾಕರ ಶೆಟ್ಟಿ, ರೊ. ಸುಕೇಶ್ ಕುಂದರ್ ಹಾಗೂ ರೊ. ಕೊರಗಪ್ಪ ಶೆಟ್ಟಿಗಾರ್ District Interact Assembly ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು.

ರೊ. ರಾಜೇಶ್ ಡಿ. ಶೆಣೈ ಅವರನ್ನು ವಾರದ ಬುಲೆಟಿನ್ ತಯಾರಿಸಿದಕ್ಕಾಗಿ, ರೊ. ಗೀತಾಶ್ರೀ ಉಪಾಧ್ಯ ಅವರನ್ನು ಫೇಸ್ಬುಕ್ ನಲ್ಲಿ ರೋಟರಿ ಐಸಿರಿಯ ಕಾರ್ಯಕ್ರಮಗಳನ್ನು ನಿರಂತರ ಪ್ರಚಾರ ಗೊಳಿಸಿದ್ದಕ್ಕಾಗಿ, ಹಾಗೂ ರೊ. ನಾಗರಾಜ್ ರಾವ್ ಅವರನ್ನು ರುಚಿಶುಚಿಯಾದ ತಿನಿಸಿನ ವ್ಯವಸ್ಥೆ ಮಾಡಿದ್ದಕ್ಕಾಗಿ ಅಧ್ಯಕ್ಷರು ಗುರುತಿಸಿದರು. ರೊ. ಗುರುಪ್ರಸಾದ್ ಕಾಮತ್ ಅವರನ್ನು ಅವರ ವೃತ್ತಿಕ್ಷೇತ್ರದಲ್ಲಿ ಸಾಧನೆಗಾಗಿ ಗುರುತಿಸಲಾಯಿತು.

ಅಧ್ಯಕ್ಷರು ಮುಂದೆ ಬರಲಿರುವ ಜಿಲ್ಲಾ ಕಾರ್ಯಕ್ರಮಕ್ಕೆ ಸರ್ವಸದಸ್ಯರ ಸಹಕಾರ ಕೋರಿದರು.

ಮಾಸ್ಟರ್ ಆಕರ್ಷ lucky Rotarian ಆಯ್ಕೆ ನಡೆಸಿ ರೊ. ರಾಜೇಶ್ ಡಿ. ಶೆಣೈ ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಗೊಂಡರು.

ಜೊತೆಕಾರ್ಯದರ್ಶಿ ವಂದನಾರ್ಪಣೆಗೈದರು.

ಕೊರಳ ಲಾಂಛನ ತೆಗೆದ ನಂತರ ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## "ಐಶ್ವರ್ಯ" 8ನೇ ಸಂಚಿಕೆ ಬಿಡುಗಡೆ



ರೊ. ರಾಜೇಶ್ ಡಿ. ಶೆಣೈ ಸಂಪಾದಕತ್ವದ ರೋಟರಿ ಐಸಿರಿಯ "ಐಶ್ವರ್ಯ" ಸಾಪ್ತಾಹಿಕ ಸಂಚಿಕೆಯ ಎಂಟನೇ ಆವೃತ್ತಿಯನ್ನು ನಮ್ಮ ಸದಸ್ಯೆ, Conference Promotion ವಲಯಾಧಿಕಾರಿ ರೊ. ಗೀತಾಶ್ರೀ ಎಂ. ಉಪಾಧ್ಯರವರು 25/08/2025 ರಂದು ಬಿಡುಗಡೆ ಗೊಳಿಸಿದರು. ಅಧ್ಯಕ್ಷ ರೊ. ಅನಿಲ್ ಕುಮಾರ್, ಜೊತೆಕಾರ್ಯದರ್ಶಿ ರೊ. ಗುರುಪ್ರಸಾದ್ ಕಾಮತ್ ಉಪಸ್ಥಿತರಿದ್ದರು.



ರೋಟರಿ ಐಸಿರಿಯ ಎಂಟನೇ ವಾರದ ಸಭೆಯಲ್ಲಿ ಈ ಅದೃಷ್ಟಶಾಲಿ ರೊಟೇರಿಯನ್ ಆಯ್ಕೆಯನ್ನು ಮಾಸ್ಟರ್ ಆಕರ್ಷ್ ನಡೆಸಿದರು. ರೊ. ರಾಜೇಶ್ ಡಿ. ಶೆಣೈ ಅವರು ಅದೃಷ್ಟಶಾಲಿ ರೋಟರಿಯನ್ ಆಗಿ ಆಯ್ಕೆಯಾದರು.